# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** : 1208
**ಸದಸ್ಯರ ಹೆಸರು** : ಡಾ: ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ)
**ಉತ್ತರಿಸುವವರು** : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು.
**ಉತ್ತರಿಸಬೇಕಾದ ದಿನಾಂಕ** : 13.03.2026.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಅಂಗನವಾಡಿ ಮಕ್ಕಳಿಗೆ ಪ್ರಸ್ತುತ ನೀಡಲಾಗುತ್ತಿರುವ ಆಹಾರಗಳೇನು; ನೀಡಲಾಗುತ್ತಿರುವ ಆಹಾರಗಳ ಪೌಷ್ಠಿಕ ಮಾನದಂಡಗಳೇನು; | ಅಂಗನವಾಡಿ ಕೇಂದ್ರಗಳ ಮಕ್ಕಳಿಗೆ ಪ್ರಸ್ತುತ ನೀಡಲಾಗುತ್ತಿರುವ ಪೂರಕ ಪೌಷ್ಠಿಕ ಆಹಾರದ ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ.<br><br>ಕೇಂದ್ರ ಸರ್ಕಾರದ ಮಾರ್ಗಸೂಚಿ ಮತ್ತು ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ-2013ರಲ್ಲಿ ನಿಗದಿಪಡಿಸಿರುವ ಪೌಷ್ಠಿಕಾಂಶದ ಮಾನದಂಡಗಳನ್ವಯ, ಅಂಗನವಾಡಿ ಕೇಂದ್ರಗಳಲ್ಲಿನ ಮಕ್ಕಳಿಗೆ ಪೂರಕ ಮೈಕ್ರೋ ನ್ಯೂಟ್ರಿಯೆಂಟ್ಸ್‌ಗಳನ್ನೊಳಗೊಂಡ ಪೌಷ್ಠಿಕ ಆಹಾರವನ್ನು ಒದಗಿಸಲಾಗುತ್ತಿದೆ. ಇದರ ಅನ್ವಯ 6 ತಿಂಗಳಿಂದ 6 ವರ್ಷದೊಳಗಿನ ಮಕ್ಕಳಿಗೆ ಪ್ರತಿದಿನ 500 ಕ್ಯಾಲೋರಿ ಹಾಗೂ 12-15 ಗ್ರಾಂ ಪ್ರೋಟೀನ್ ಮತ್ತು ತೀವ್ರ ಅಪೌಷ್ಠಿಕತೆಯಿಂದ ಬಳಲುತ್ತಿರುವ ಮಕ್ಕಳಿಗೆ ಪ್ರತಿದಿನ 800 ಕ್ಯಾಲೋರಿ ಹಾಗೂ 20-25 ಗ್ರಾಂ ಪ್ರೋಟೀನ್ ನೀಡಲಾಗುತ್ತಿದೆ. |
| ಆ) | ಅಂಗನವಾಡಿಗಳಲ್ಲಿ ಚಿಕ್ಕಿ ವಿತರಣೆ ನಿಲ್ಲಿಸಿರುವ ಹಿನ್ನೆಲೆ ಏನು; ಅದರ ಬದಲಿಗೆ ನೀಡಲಾಗುತ್ತಿರುವ ಆಹಾರದ ಪೌಷ್ಠಿಕ ಮೌಲ್ಯ ಮಾಪನ ಕೈಗೊಳ್ಳಲಾಗಿದೆಯೇ; | ಮಕ್ಕಳಲ್ಲಿ ಸಕ್ಕರೆಯಂಶದ ಸಮತೋಲನವನ್ನು ಕಾಯ್ದುಕೊಳ್ಳುವ ಸಲುವಾಗಿ ಅಂಗನವಾಡಿ ಕೇಂದ್ರಗಳಲ್ಲಿ ಚಿಕ್ಕಿ ವಿತರಣೆಯನ್ನು ಸ್ಥಗಿತಗೊಳಿಸಲಾಗಿದೆ.<br><br>ಕೇಂದ್ರ ಸರ್ಕಾರದ Wheat Based Nutrition Programme (WBNP) ಯೋಜನೆಯ ಮಾರ್ಗಸೂಚಿಗಳನ್ವಯ ಪ್ರತಿ ಫಲಾನುಭವಿಗೆ ಪ್ರತಿದಿನ 100 ಗ್ರಾಂ ಅಕ್ಕಿ ಅಥವಾ ಗೋಧಿ ಹಾಗೂ ಸಿರಿಧಾನ್ಯಗಳನ್ನು ವಿತರಿಸಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ, ಕೇಂದ್ರ ಸರ್ಕಾರ ನಿಗದಿಪಡಿಸಿರುವ ಘಟಕ ವೆಚ್ಚದ ಮಿತಿಯಲ್ಲಿಯೇ ರಕ್ಷಣಾ ಆಹಾರ ಸಂಶೋಧನಾ ಪ್ರಯೋಗಾಲಯ, ಮೈಸೂರು (DFRL) ಅನುಮೋದಿಸಿರುವ ಪೌಷ್ಠಿಕಾಂಶದ ಸೂತ್ರ (formula) ಹಾಗೂ ನಿರ್ದಿಷ್ಟತೆಗಳಿಗೆ (specification) ಅನುಗುಣವಾಗಿ ಪ್ರಸ್ತುತ ಆಹಾರ ಮೆನುವನ್ನು ಸಿದ್ಧಪಡಿಸಲಾಗಿದೆ.<br><br>ಕೇಂದ್ರ ಸರ್ಕಾರದ ಮಾರ್ಗಸೂಚಿಯಲ್ಲಿ ಮಕ್ಕಳ ಪ್ರತಿ ದಿನದ ಸಕ್ಕರೆ ಸೇವನೆಯ ಗರಿಷ್ಠ ಪ್ರಮಾಣವನ್ನು 25 ಗ್ರಾಂಗಳಿಗೆ ಸೀಮಿತಗೊಳಿಸಿದೆ. ಪ್ರಸ್ತುತ ಜಾರಿಯಲ್ಲಿರುವ ಮೆನುವಿನಂತೆ ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳಿಗೆ ಈಗಾಗಲೇ ಪುಷ್ಠಿ ಮಿಶ್ರಣ, ಬೆಲ್ಲ ಹಾಗೂ ಸಿರಿಧಾನ್ಯದ ಲಡ್ಡು, ಹಾಲು ಮತ್ತು ಸಕ್ಕರೆಯನ್ನು ವಿತರಿಸಲಾಗುತ್ತಿದ್ದು, ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಕ್ರಮವಹಿಸಲಾಗುತ್ತಿದೆ.<br><br>ಡಿಫೆನ್ಸ್ ಫುಡ್ ರಿಸರ್ಚ್ ಲ್ಯಾಬೋರೇಟರಿ (DFRL) ಮೈಸೂರು ಇವರ ಸೂತ್ರದಂತೆ ಸಿದ್ಧಪಡಿಸಲಾದ ಪ್ರಸ್ತುತ ಮೆನು ಕೇಂದ್ರ ಸರ್ಕಾರದ ಮಾರ್ಗಸೂಚಿಯಲ್ಲಿ ನಿಗದಿಪಡಿಸಿದ ಕ್ಯಾಲೋರೀಸ್ ಪ್ರೋಟೀನ್, ಮೈಕ್ರೋ ನ್ಯೂಟ್ರಿಯೆಂಟ್ಸ್ ಮೌಲ್ಯವನ್ನು ಒಳಗೊಂಡಂತೆ ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳಿಗೆ ಪೂರಕ ಪೌಷ್ಠಿಕ ಆಹಾರ ವಿತರಿಸಲಾಗುತ್ತಿದೆ. |

| | | |
|---|---|---|
| ಇ) | ಅಂಗನವಾಡಿ ಮಕ್ಕಳಿಗೆ ಎಷ್ಟು ದಿನಗಳಿಗೊಮ್ಮೆ ಮೊಟ್ಟೆಗಳನ್ನು ವಿತರಿಸಲಾಗುತ್ತಿದೆ; ವಿತರಿಸಲಾಗುತ್ತಿರುವ ಮೊಟ್ಟೆಯು ಪೌಷ್ಟಿಕ ಮಾನದಂಡಗಳಿಗೆ ಅನುಗುಣವಾಗಿದೆಯೇ; | ಸೃಷ್ಟಿ ಯೋಜನೆಯಡಿ ಅಂಗನವಾಡಿ ಕೇಂದ್ರಗಳಲ್ಲಿ ಘಟಕ ವೆಚ್ಚ ರೂ.6/-ರಂತೆ **03 ರಿಂದ 06 ವರ್ಷದ** ಎಲ್ಲಾ ಸಾಮಾನ್ಯ ಮಕ್ಕಳಿಗೆ ವಾರದಲ್ಲಿ ಎರಡು ದಿನ ಮೊಟ್ಟೆಯನ್ನು ನೀಡಲಾಗುತ್ತಿದೆ.<br><br>**06 ತಿಂಗಳಿನಿಂದ 03 ವರ್ಷದೊಳಗಿನ** ತೀವ್ರ ಹಾಗೂ ಸಾಧಾರಣ ಅಪೌಷ್ಟಿಕತೆಯುಳ್ಳ ಮಕ್ಕಳಿಗೆ ವಾರದಲ್ಲಿ ಮೂರು ದಿನ ಮೊಟ್ಟೆಯನ್ನು ನೀಡಲಾಗುತ್ತಿದೆ.<br><br>ಅಂತೆಯೇ, **03 ರಿಂದ 06 ವರ್ಷದ** ತೀವ್ರ ಮತ್ತು ಸಾಧಾರಣ ಅಪೌಷ್ಟಿಕತೆಯುಳ್ಳ ಮಕ್ಕಳಿಗೆ ವಾರದಲ್ಲಿ ಐದು ದಿನ ಮೊಟ್ಟೆಯನ್ನು ನೀಡಲಾಗುತ್ತಿದ್ದು, ಮೊಟ್ಟೆಗಳು ನಿಗದಿಪಡಿಸಿದ ಪೌಷ್ಟಿಕಾಂಶದ ಮಾನದಂಡಗಳಿಗೆ ಅನುಗುಣವಾಗಿರುತ್ತದೆ. |
| ಈ) | ರಾಜ್ಯದಲ್ಲಿರುವ ಅಂಗನವಾಡಿ MSPC ಪ್ರತಿ ಕೇಂದ್ರದ ಅಡಿಯಲ್ಲಿ ಬರುವ ಅಂಗನವಾಡಿಗಳ ಸಂಖ್ಯೆ ಎಷ್ಟು; | ರಾಜ್ಯದಲ್ಲಿ ಪ್ರಸ್ತುತ 137 ಎಂ.ಎಸ್.ಪಿ.ಸಿಗಳನ್ನು ಉತ್ಪಾದನಾ ಸಾಮರ್ಥ್ಯ, ಬೇಡಿಕೆ ಹಾಗೂ ಅಗತ್ಯತೆಗೆ ಅನುಗುಣವಾಗಿ ಜಿಲ್ಲೆಗಳಲ್ಲಿ ಕನಿಷ್ಠ 2 ರಿಂದ 3 ಮತ್ತು ಗರಿಷ್ಠ 10 ರಂತೆ ಸ್ಥಾಪಿಸಲಾಗಿದೆ. |
| ಉ) | MSPC ಪ್ರತಿ ಕೇಂದ್ರದ ಸಂಖ್ಯೆ ಹೆಚ್ಚಳ ಮಾಡುವ ಕುರಿತು ಹಾಗೂ ಆ ಮೂಲಕ ಗುಣಮಟ್ಟದ ಆಹಾರ ಉತ್ಪಾದನೆ ಮತ್ತು ಸರಿಯಾದ ಸಮಯಕ್ಕೆ ಆಹಾರ ಸರಬರಾಜು ಖಾತ್ರಿ ಪಡಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ; | ಜಿಲ್ಲೆಗಳಿಂದ ಹೊಸ ಎಂ.ಎಸ್.ಪಿ.ಸಿ.ಗಳ ಸ್ಥಾಪನೆಗೆ ಪ್ರಸ್ತಾವನೆಗಳು ಬಂದಲ್ಲಿ ಅವುಗಳನ್ನು ಪರಿಗಣಿಸಲಾಗುತ್ತಿದೆ.<br><br>ರಾಜ್ಯದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ 137 ಮಹಿಳಾ ಪೂರಕ ಪೌಷ್ಟಿಕ ಉತ್ಪಾದನಾ ಕೇಂದ್ರಗಳನ್ನು Rationalize ಮಾಡಲು ಹಾಗೂ ಎಂ.ಎಸ್.ಪಿ.ಸಿಗಳನ್ನು ಭೌಗೋಳಿಕವಾಗಿ ವರ್ಗೀಕರಿಸಲು ಸಹ ಕ್ರಮವಹಿಸಲಾಗುತ್ತಿದೆ.<br><br>ಎಂ.ಎಸ್.ಪಿ.ಸಿ.ಗಳ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಲು ಆಧುನೀಕರಣ ಯಂತ್ರೋಪಕರಣಗಳನ್ನು ಅಳವಡಿಸಿ ಎಂ.ಎಸ್.ಪಿ.ಸಿ.ಗಳನ್ನು ಉನ್ನತೀಕರಿಸಲು ಕ್ರಮ ವಹಿಸಲಾಗುತ್ತಿದೆ. |
| ಊ) | ಒಟ್ಟಾರೆ ಅಂಗನವಾಡಿ ಕೇಂದ್ರಗಳಲ್ಲಿನ ಮಕ್ಕಳಿಗೆ ವಿತರಿಸಲಾಗುವ ಆಹಾರದ ಗುಣಮಟ್ಟ ಹೆಚ್ಚಿಸಲು, ಕಳಪೆ ಆಹಾರ ತಡೆಗಟ್ಟಲು ಸಮಯಕ್ಕೆ ಆಹಾರ ಸರಬರಾಜು ಮಾಡಲು ಸರ್ಕಾರ ಯಾವ ಕ್ರಮಕೈಗೊಳ್ಳಲಿದೆ? (ವಿವರ ಒದಗಿಸುವುದು) | ಅಂಗನವಾಡಿ ಕೇಂದ್ರಗಳಲ್ಲಿ ಫಲಾನುಭವಿಗಳಿಗೆ ಉತ್ತಮ ಗುಣಮಟ್ಟದ ಪೂರಕ ಪೌಷ್ಟಿಕ ಆಹಾರವನ್ನು ಸಕಾಲದಲ್ಲಿ ಪೂರೈಸಲು ಈ ಕೆಳಕಂಡ ಕಟ್ಟುನಿಟ್ಟಿನ ಕ್ರಮಕೈಗೊಳ್ಳಲಾಗಿದೆ.<br><br>1. 2017 ರಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರ ನಿಗದಿಗೊಳಿಸಿರುವ ಘಟಕ ವೆಚ್ಚದ ಮಿತಿಯಲ್ಲಿ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ನಿಗದಿತ ಕ್ಯಾಲೋರೀಸ್, ಪ್ರೋಟೀನ್‌ಗಳನ್ನೊಳಗೊಂಡ ಅಗತ್ಯ ಪ್ರಮಾಣದ ಪೂರಕ ಪೌಷ್ಟಿಕ ಆಹಾರವನ್ನು ಯಾವುದೇ ವ್ಯತ್ಯಯವಿಲ್ಲದೆ ಸಮರ್ಪಕವಾಗಿ ಪೂರೈಸಲಾಗುತ್ತಿದೆ.<br><br>2. ಅಂಗನವಾಡಿ ಕೇಂದ್ರಗಳ ಫಲಾನುಭವಿಗಳಿಗೆ ಆಹಾರ ಪದಾರ್ಥಗಳನ್ನು ವಿತರಿಸುವ ಮುನ್ನ NABL (National Accreditation Board for Testing and Calibration Laboratories) ನಲ್ಲಿ ನೋಂದಾಯಿತವಾದ ಪ್ರಯೋಗಾಲಯಗಳ ಮೂಲಕ ಆಹಾರದಲ್ಲಿನ ಪೌಷ್ಟಿಕಾಂಶಗಳ ಗುಣಮಟ್ಟ ಮತ್ತು ನಿಯತಾಂಕಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಿ ಉತ್ತಮ ಗುಣಮಟ್ಟದ ಪೂರಕ ಪೌಷ್ಟಿಕ ಆಹಾರವನ್ನು ಎಂ.ಎಸ್.ಪಿ.ಸಿ.ಗಳಿಂದ ಅಂಗನವಾಡಿ ಕೇಂದ್ರಗಳಿಗೆ ಸರಬರಾಜು ಮಾಡಲಾಗುತ್ತಿದೆ.<br><br>3. ಅಂಗನವಾಡಿ ಕೇಂದ್ರದ ಫಲಾನುಭವಿಗಳಿಗೆ ಸಕಾಲದಲ್ಲಿ ಉತ್ತಮ ಗುಣಮಟ್ಟದ ಪೂರಕ ಪೌಷ್ಟಿಕ ಆಹಾರವನ್ನು |

| | | |
|---|---|---|
| | | ಪೂರೈಸಲು ಮತ್ತು ಅದರ ಮೇಲ್ವಿಚಾರಣೆ ಮಾಡಲು ಅನುಕೂಲವಾಗುವಂತೆ, ಪ್ರತಿ ತಿಂಗಳು ಫಲಾನುಭವಿಗಳ ವಿವರಗಳೊಂದಿಗೆ ಬೇಡಿಕೆಯನ್ನು (ಇಂಡೆಂಟ್) ಎಂ.ಎಸ್.ಪಿ.ಸಿ.ಗಳಿಗೆ ಸಲ್ಲಿಸಲಾಗುತ್ತಿದೆ. ಬೇಡಿಕೆಗೆ ಅನುಗುಣವಾಗಿ ಎಂ.ಎಸ್.ಪಿ.ಸಿ.ಗಳು ಆಹಾರ ಪದಾರ್ಥಗಳನ್ನು ನೇರವಾಗಿ ಅಂಗನವಾಡಿ ಕೇಂದ್ರಗಳಿಗೆ ಸರಬರಾಜು ಮಾಡುತ್ತವೆ.<br><br>4. ಪೂರಕ ಪೌಷ್ಟಿಕ ಆಹಾರವು ಸಕಾಲಕ್ಕೆ ಪೂರೈಕೆಯಾಗುತ್ತಿರುವುದನ್ನು ಮತ್ತು ಅಂಗನವಾಡಿ ಕೇಂದ್ರಗಳ ಫಲಾನುಭವಿಗಳಿಗೆ ವಿತರಣೆಯಾಗುತ್ತಿರುವುದನ್ನು ಖಚಿತಪಡಿಸಿಕೊಳ್ಳಲು, ಕೇಂದ್ರ ಸರ್ಕಾರದ ಪೋಷಣ್ ಟ್ರ್ಯಾಕರ್ ಅಪ್ಲಿಕೇಶನ್ ಹಾಗೂ ಫೇಸ್ ರೆಕಗ್ನಿಷನ್ ಸಿಸ್ಟಮ್ (FRS) ಮೂಲಕ ನೈಜ ಸಮಯದಲ್ಲಿ ಮೇಲ್ವಿಚಾರಣೆ ಮಾಡಲಾಗುತ್ತದೆ. ಇದರೊಂದಿಗೆ, ಪ್ರತಿ ಅಂಗನವಾಡಿಯಲ್ಲಿ ಬಾಲವಿಕಾಸ ಸಮಿತಿ ಹಾಗೂ ಜಿಲ್ಲಾ ಮಟ್ಟದಲ್ಲಿ ಮೇಲ್ವಿಚಾರಣಾ ಸಮಿತಿಯನ್ನು ಸಹ ರಚಿಸಲಾಗಿದೆ.<br><br>5. ಇಲಾಖೆಯ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಅಂಗನವಾಡಿ ಕೇಂದ್ರಗಳ ಕುರಿತು ಕಟ್ಟುನಿಟ್ಟಿನ ಮೇಲ್ವಿಚಾರಣೆ ಮಾಡಲು ಹಾಗೂ ಜವಾಬ್ದಾರಿ ಕಾರ್ಯನಿರ್ವಹಣೆಯನ್ನು ಖಾತ್ರಿ ಪಡಿಸಿಕೊಳ್ಳಲು ಸೂಚಿಸಲಾಗಿದೆ. |

**ಸಂಖ್ಯೆ: ಮಮಇ 76 ಐಸಿಡಿ 2026**



**(ಲಕ್ಷ್ಮೀ ಆರ್. ಹೆಬ್ಬಾಳಕರ್)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಸಚಿವರು

## ಅನುಬಂಧ

### ಅಂಗನವಾಡಿ ಕೇಂದ್ರಗಳಲ್ಲಿ ಒದಗಿಸುತ್ತಿರುವ ಪೂರಕ ಪೌಷ್ಟಿಕ ಆಹಾರದ ವಿವರ

| ಕ್ರ ಸಂ | ಫಲಾನುಭವಿಗಳ ವರ್ಗ | ವಿವರ | ಅಂಗನವಾಡಿ ಕೇಂದ್ರಗಳಲ್ಲಿ ಒದಗಿಸುತ್ತಿರುವ ಪೂರಕ ಪೌಷ್ಟಿಕ ಆಹಾರ | ಪ್ರಮಾಣ ಮತ್ತು ವಿತರಣ ದಿನಗಳು |
|---|---|---|---|---|
| 1 | **06 ತಿಂಗಳಿಂದ 03 ವರ್ಷದ ಮಕ್ಕಳು** | **ಸಾಮಾನ್ಯ ಮಕ್ಕಳು** | ಪುಷ್ಟಿ, ಬೆಲ್ಲ **(THR)** | 120 ಗ್ರಾಂ, 31 ಗ್ರಾಂ 25 ದಿನಗಳು |
| | | | ಹಾಲಿನ ಪುಡಿ, ಸಕ್ಕರೆ **(THR)** | 15 ಗ್ರಾಂ, 05 ಗ್ರಾಂ 25 ದಿನಗಳು |
| | | **ತೀವ್ರ ಅಪೌಷ್ಟಿಕ ಮಕ್ಕಳು** | ಪುಷ್ಟಿ, ಬೆಲ್ಲ **(THR)** | 200 ಗ್ರಾಂ, 50 ಗ್ರಾಂ 25 ದಿನಗಳು |
| | | | ಹಾಲಿನ ಪುಡಿ, ಸಕ್ಕರೆ **(THR)** | ಸಾಮನ್ಯ ಮಕ್ಕಳಿನಂತೆ ವಾರದಲ್ಲಿ 05 ದಿನ 15 ಗ್ರಾಂ ಹಾಲಿನಪುಡಿಯೊಂದಿಗೆ ಹೆಚ್ಚುವರಿಯಾಗಿ ವಾರದಲ್ಲಿ 03 ದಿನ ದಿನಕ್ಕೆ 20 ಗ್ರಾಂ ಹಾಲಿನ ಪುಡಿ 05 ಗ್ರಾಂ ಸಕ್ಕರೆ ಮನಗೆ ವಿತರಿಸಲಾಗುತ್ತಿದೆ. |
| | | | ಮೊಟ್ಟೆ | ವಾರದಲ್ಲಿ 03 ದಿನಗಳು |
| | | **ಸಾಧಾರಣ ಅಪೌಷ್ಟಿಕ ಮಕ್ಕಳು** | ಪುಷ್ಟಿ, ಬೆಲ್ಲ **(THR)** | 120 ಗ್ರಾಂ, 31 ಗ್ರಾಂ 25 ದಿನಗಳು |
| | | | ಹಾಲಿನ ಪುಡಿ, ಸಕ್ಕರೆ **(THR)** | ಸಾಮನ್ಯ ಮಕ್ಕಳಿನಂತೆ ವಾರದಲ್ಲಿ 05 ದಿನ 15 ಗ್ರಾಂ ಹಾಲಿನಪುಡಿಯೊಂದಿಗೆ ಹೆಚ್ಚುವರಿಯಾಗಿ ವಾರದಲ್ಲಿ 03 ದಿನ ದಿನಕ್ಕೆ 20 ಗ್ರಾಂ ಹಾಲಿನ ಪುಡಿ 05 ಗ್ರಾಂ ಸಕ್ಕರೆ ಮನೆಗೆ ವಿತರಿಸಲಾಗುತ್ತಿದೆ. |
| | | | ಮೊಟ್ಟೆ | ವಾರದಲ್ಲಿ 03 ದಿನಗಳು |
| 2 | **03 ವರ್ಷದಿಂದ 06 ವರ್ಷದ ಮಕ್ಕಳು** | **ಸಾಮಾನ್ಯ ಮಕ್ಕಳು** | ಮಿಲೆಟ್ ಲಾಡು (ಬೆಳಗಿನ ಉಪಹಾರ) | 40 ಗ್ರಾಂ, 25 ದಿನಗಳು |
| | | | ರವಾ ಉಪ್ಪಿಟ್ಟು (ಮಧ್ಯಾಹ್ನದ ಬಿಸಿಯೂಟ) | 90 ಗ್ರಾಂ, 09 ದಿನಗಳು |
| | | | ರವಾ ಪಾಯಸ (ಮಧ್ಯಾಹ್ನದ ಬಿಸಿಯೂಟ) | 90 ಗ್ರಾಂ, 04 ದಿನಗಳು |
| | | | ಅನ್ನ ಸಾಂಬಾರ್ (ಮಧ್ಯಾಹ್ನದ ಬಿಸಿಯೂಟ) | 90 ಗ್ರಾಂ, 12 ದಿನಗಳು |
| | | | ಹಾಲು, ಸಕ್ಕರೆ | 150 ಮಿ.ಲಿ, 05 ಗ್ರಾಂ 25 ದಿನಗಳು |
| | | | ಮೊಟ್ಟೆ | ವಾರದಲ್ಲಿ 02 ದಿನ |
| | | **ತೀವ್ರ ಅಪೌಷ್ಟಿಕ ಮಕ್ಕಳು** | ಮಿಲೆಟ್ ಲಾಡು (ಬೆಳಗಿನ ಉಪಹಾರ) | 40 ಗ್ರಾಂ, 25 ದಿನಗಳು |
| | | | ರವಾ ಉಪ್ಪಿಟ್ಟು (ಮಧ್ಯಾಹ್ನದ ಬಿಸಿಯೂಟ) | 90 ಗ್ರಾಂ, 09 ದಿನಗಳು |
| | | | ರವಾ ಪಾಯಸ (ಮಧ್ಯಾಹ್ನದ ಬಿಸಿಯೂಟ) | 90 ಗ್ರಾಂ, 04 ದಿನಗಳು |
| | | | ಅನ್ನ ಸಾಂಬಾರ್ (ಮಧ್ಯಾಹ್ನದ ಬಿಸಿಯೂಟ) | 90 ಗ್ರಾಂ, 12 ದಿನಗಳು |
| | | | ಹಾಲು, ಸಕ್ಕರೆ | ಸಾಮನ್ಯ ಮಕ್ಕಳಿನಂತೆ ವಾರದಲ್ಲಿ 05 ದಿನ 15 ಗ್ರಾಂ ಹಾಲಿನಪುಡಿಯೊಂದಿಗೆ ಹೆಚ್ಚುವರಿಯಾಗಿ ವಾರದಲ್ಲಿ 03 ದಿನ ದಿನಕ್ಕೆ 20 ಗ್ರಾಂ ಹಾಲಿನ ಪುಡಿ 05 ಗ್ರಾಂ ಸಕ್ಕರೆ ಮನೆಗೆ ವಿತರಿಸಲಾಗುತ್ತಿದೆ. |
| | | | ಮೊಟ್ಟೆ | ವಾರದಲ್ಲಿ 05 ದಿನ |
| | | | ಪುಷ್ಟಿ, ಬೆಲ್ಲ **(THR)** | 80 ಗ್ರಾಂ, 20 ಗ್ರಾಂ 25 ದಿನಗಳು |
| | | **ಸಾಧಾರಣ ಅಪೌಷ್ಟಿಕ ಮಕ್ಕಳು** | ಮಿಲೆಟ್ ಲಾಡು (ಬೆಳಗಿನ ಉಪಹಾರ) | 25 ಗ್ರಾಂ, 25 ದಿನಗಳು |
| | | | ರವಾ ಉಪ್ಪಿಟ್ಟು (ಮಧ್ಯಾಹ್ನದ ಬಿಸಿಯೂಟ) | 110 ಗ್ರಾಂ, 09 ದಿನಗಳು |
| | | | ರವಾ ಪಾಯಸ (ಮಧ್ಯಾಹ್ನದ ಬಿಸಿಯೂಟ) | 110 ಗ್ರಾಂ, 04 ದಿನಗಳು |
| | | | ಅನ್ನ ಸಾಂಬಾರ್ (ಮಧ್ಯಾಹ್ನದ ಬಿಸಿಯೂಟ) | 110 ಗ್ರಾಂ, 12 ದಿನಗಳು |
| | | | ಹಾಲು, ಸಕ್ಕರೆ | ಸಾಮನ್ಯ ಮಕ್ಕಳಿನಂತೆ ವಾರದಲ್ಲಿ 05 ದಿನ 15 ಗ್ರಾಂ ಹಾಲಿನಪುಡಿಯೊಂದಿಗೆ ಹೆಚ್ಚುವರಿಯಾಗಿ ವಾರದಲ್ಲಿ 03 ದಿನ ದಿನಕ್ಕೆ 20 ಗ್ರಾಂ ಹಾಲಿನ ಪುಡಿ 05 ಗ್ರಾಂ ಸಕ್ಕರೆ ಮನೆಗೆ ವಿತರಿಸಲಾಗುತ್ತಿದೆ. |
| | | | ಮೊಟ್ಟೆ | ವಾರದಲ್ಲಿ 05 ದಿನ |